O.S.92/2022 PW-4

ದಿನಾಂಕಃ 02.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನನ್ನ ತಾಯಿಗೆ ಮೂರು ಜನ ಮಕ್ಕಳು. ದಾವಾ ಸ್ವತ್ತಿನ ಸರ್ವೆ ನಂ.70/8. ಸರ್ವೆ ನಂ.70/2 ಇದ್ದಾಗ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇವೆ ನಂತರ ಹದ್ದು ಬಸ್ತು ಆಗಿ ಸರ್ವೆ ನಂ.70/8 ಆಗಿರುತ್ತದೆ. ಸರ್ವೆ ನಂ.70 ರಲ್ಲಿ ಎಷ್ಟು ಪೋಡು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಯು ಸರ್ವೆ ನಂ.70/2 ಇದ್ದಾಗ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ನಾವು ಖರೀದಿ ಮಾಡುವ ಮೊದಲು 4 ಪೋಡುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಸರ್ವೆ ನಂ.70 ರಲ್ಲಿ ಎಷ್ಟು ಪೋಡುಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಕ್ರಯವಾದ ನಂತರ ನಾವು ದುರಸ್ತಿ ಮಾಡಿಸಲು ಹೋದಾಗ ಎಷ್ಟು ಪೋಡುಗಳು ಇದ್ದವು ಎಂದರೆ ಸಾಕ್ಷಿಯು ನಾವು ನಮ್ಮ ಜಮೀನಿಗೆ ಮಾತ್ರ ಹದ್ದುಬಸ್ತು ಮಾಡಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಸರ್ವೆ ಸಮಯದಲ್ಲಿ ಪ್ರತಿವಾದಿಗೆ ಮತ್ತು ಬೇವಿಹಳ್ಳಮ್ಮ, ದಾಸಪ್ಪರವರಿಗೆ ನೋಟಿಸ್ ಕೊಟ್ಟಿರುತ್ತಾರೆ. ಬೇವಿನಹಳ್ಳಮ್ಮ ರವರ ಗಂಡನ ಹೆಸರು ದೊಡ್ಡಹೊನ್ನಪ್ಪ. ದೊಡ್ಡಹೊನ್ನಪ್ಪರವರು ಮೃತಪಟ್ಟಿರುತ್ತಾರೆ. ಅವರ ಜಮೀನು ಬೇವಿನಹಳ್ಳಮ್ಮ ರವರ ಹೆಸರಿಗೆ ಆಗಿರುತ್ತದೆ. ಬೇವಿನಹಳ್ಳಮ್ಮ ರವರ ಜಮೀನು ಇದೆ ಎಂದು ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ ದುರಸ್ತಿ ಮಾಡಲು ಅರ್ಜಿಯನ್ನು ಕೊಟ್ಟಿರುತ್ತೇವೆ. ಎಲ್ಲರೂ ನೋಟಿಸ್ ಅನ್ನು ಸ್ವೀಕರಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ DDLR Court ತುಮಕೂರಿನಿಂದ ನೋಟಿಸ್ ಬಂದಿತ್ತು ಎಂದರೆ  ಸಾಕ್ಷಿಯು ಸದರಿ ಜಮೀನಿಗೆ ಸೇರಿವು ನೋಟಿಸ್ ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ನೋಟಿಸ್ ಗೆ ತಕರಾರನ್ನು ಬರೆದುಹಾಕಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಕಛೇರಿಗೆ ಹೋದಾಗ ಅವರು ನಮ್ಮನ್ನು ಬಿಟ್ಟಿರುವುದಿಲ್ಲ. ನಮ್ಮ ವಕೀಲರಿಗೆ ನಾನು ಪೂರ್ಣ ಮಾಹಿತಿಯನ್ನು ನೀಡಿದ್ದೆ ಎಂದರೆ ಸರಿ. ದಾವಾ ಹೂಡಿದ ನಂತರ  ನಾವು ಪ್ರತಿವಾದಿಗಳ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಸದರಿ ಜಮೀನಿನ ಗಲಾಟೆಯಲ್ಲಿ  ನಮ್ಮ ಮನೆಗೆ ಬೆಂಕಿ ಹಾಕಿದರು ಎಂದು ನುಡಿದಿರುತ್ತಾರೆ. SC.132/2022 ರ ಪ್ರಕರಣ ಎಂದರೆ ಸರಿ. ಸದರಿ ಪ್ರಕರಣವು ಆರೋಪಿಗಳ ಮೇಲೆ ಕುಲಾಸೆಯಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆದೇಶದ ಮೇರೆಗೆ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು  ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. DDLR Court ರಲ್ಲಿ 27.01.2021 ರಂದು ಪ್ರತಿವಾದಿಗಳ ಮನವಿಯನ್ನು ಪುರಸ್ಕರಿಸಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮಗೆ ಯಾವುದೇ ಅವಕಾಶಗಳು ಕೊಡದೆ ಸದರಿ ಆದೇಶವನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾವೆಯನ್ನು ಸಲ್ಲಿಸುವ ಮುನ್ನ

ಎಲ್ಲಾ ಪೋಡುಳು ರದ್ದಾಗಿದ್ದವು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಲು ನನಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.